ದಿನಾಂಕಃ 15.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃವಾದಿ ಪರ ವಕೀಲರಿಂದಃ</u>**

ನಾನು ಬಿ.ಎ. ಪದವೀಧರ. ವಾದಿಗಳ ತಂದೆಯನ್ನು ನಾನು ನೋಡಿರುತ್ತೇನೆ. ವಾದಿ ತಂದೆ ಗಣೇಶಪ್ಪರವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲನೆ ಹೆಂಡತಿ ಜುಂಜಮ್ಮರವರ ಮಕ್ಕಳು ವಾದಿಗಳು ಎಂದರೆ ಸರಿ. 2ನೆ ಹೆಂಡತಿ ಚಿನ್ನಮ್ಮರವರಿಗೆ 3 ಜನ ಗಂಡು ಮಕ್ಕಳು ಮತ್ತು 2 ಹೆಣ್ಣು ಮಕ್ಕಳು ಎಂದರೆ ಸರಿ. 6ನೇ ಪ್ರತಿವಾದಿಯ ಗಂಡನ ಹೆಸರು ರಾಜಣ್ಣ ಎಂದರೆ ಸರಿ. 4 ಮತ್ತು 5 ನೇ ಪ್ರತಿವಾದಿ ಚಿನ್ನಮ್ಮರವರ ಮಗ ಗಣೇಶನವರ ಹೆಂಡತಿ ಮತ್ತು ಮಗ ಎಂದರೆ ಸರಿ. ಚಿನ್ನಮ್ಮರವರ ಮಗ ಕೊಳಂದಪ್ಪ ಆದ 1ನೇ ಪ್ರತಿವಾದಿಯ ಮರಣದ ನಂತರ ಅವರ ಮಕ್ಕಳು ವಾರಸುದಾರರಾಗಿ ಬಂದಿದ್ದಾರೆ ಎಂದರೆ ಸರಿ.  ಈ ದಾವೆಯನ್ನು ವಾದಿಗಳು ಪ್ರತಿವಾದಿಗಳ ವಿರುದ್ಧ ಭಾಗಾಂಶ ಕೇಳಿ ಹೂಡಿರುತ್ತಾರೆ. ಸರ್ವೆ ನಂಬರ್ 233/4ರಲ್ಲಿ 4 ಎಕರೆ 37 ಗುಂಟೆ ಗಣೇಶಪ್ಪ ರವರಿಗೆ ಸರ್ಕಾರದಿಂದ ಮಂಜೂರಾದ ಜಮೀನು ಎಂದರೆ ಸರಿ. ಸಾಕ್ಷಿ ಮುಂದುವರೆದು 1ನೇ ಪ್ರತಿವಾದಿ ಮೈನರ್ ಎಂದು ಗಣೇಶಪ್ಪರವರ ಹೆಸರಿಗೆ ಮಂಜೂರಾಗಿದೆ ಎಂದು ನುಡಿಯುತ್ತಾರೆ. ಈ ಬಗ್ಗೆ ದಾಖಲೆ ಇರುವ ಬಗ್ಗೆ ನನಗೆ ಗೊತ್ತಿಲ್ಲ, ಚಿನ್ನಮ್ಮರವರು ಹೇಳಿರುತ್ತಾರೆ.

ಚಿನ್ನಮ್ಮರವರು ಯಾವಾಗ ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಐಟಂ ನಂಬರ್ 2 ಗಣೇಶಪ್ಪರವರಿಗೆ ಸೇರಿದ್ದು ಎಂದರೆ ಸರಿ. ಗಣೇಶಪ್ಪನ ಮರಣದ ನಂತರ ದಾವಾ ಸ್ವತ್ತುಗಳಲ್ಲಿ ವಾದಿ ಮತ್ತು ಪ್ರತಿವಾದಿಗಳು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿ.ಗಣೇಶಪ್ಪರವರು ಮೃತಪಟ್ಟನಂತರ ದಾವಾ ಸ್ವತ್ತಿನ ಐಟಂ ನಂಬರ್ 1 ಚಿನ್ನಮ್ಮರವರ ಹೆಸರಿಗೆ ಪೌವತಿ ವಾರಸು ಮೂಲಕ ಬದಲಾಗಿದೆ ಎಂದರೆ ಸರಿ. ಅದೇ ರೀತಿ ಪಹಣಿ ಕೂಡ ಚಿನ್ನಮ್ಮರವರ ಹೆಸರಿಗೆ ಬದಲಾಗಿದೆ ಎಂದರೆ ಸರಿ. ನಿಡಿ-1ನ್ನು ಬರೆಯುವಾಗ ನಾನು ಇರಲಿಲ್ಲ. ನಂತರ ನೊಂದಣಾಧಿಕಾರಿಗಳ ಕಛೇರಿಯಲ್ಲಿ ಸಹಿ ಹಾಕಿರುತ್ತೇನೆ. ನಾನು ನೊಂದಣಾಧಿಕಾರಿಗಳ ಕಛೇರಿಗೆ ಬಂದಾಗ ನಿಡಿ-1ಕ್ಕೆ ಯಾರು ಕೂಡ ಸಹಿಹಾಕಿರುವುದಿಲ್ಲ.  ನಿಡಿ-1ಕ್ಕೆ ಚಿನ್ನಮ್ಮರವರು ಸಹಿ ಹಾಕಿದ ನಂತರ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ನಂತರ ಚೂಡಮಣಿಗೌಡ ಎಂಬುವವರು ಸಹಿ ಹಾಕಿರುತ್ತಾರೆ. ನಂತರ ಕುಮಾರ್ ಎಂಬ ವಕೀಲರು ಸಹಿ ಹಾಕಿರುತ್ತಾರೆ. ನಾನು ನಿಡಿ-1ನ್ನು ಓದಿದ ನಂತರ ಸಹಿಯನ್ನು ಹಾಕಿರುತ್ತೇನೆ. ನಿಡಿ-1ರಲ್ಲಿ ಚಿನ್ನಮ್ಮರವರಿಗೆ ದಾವಾ ಸ್ವತ್ತಿನ ಐಟಂ

ನಂಬರ್ 1 ಪೌವತಿ ವಾರಸು ಮಾಲಕ ಬಂದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸದರಿ ಜಮೀನು ಪೌತಿ ವಾರಸು ಅಥವಾ ವಿಲ್ ನ ಮೂಖಾಂತರ ಬಂದ ಬಗ್ಗೆ ಬರೆಸಿದ್ದೀರ ಎಂದರೆ ನನಗೆ ನೆನಪಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಇರುವ ಅಂಶಗಳು ಈಗ ನನಗೆ ನೆನಪಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಮೊದಲೇ ಸಿದ್ಧ ಪಡಿಸಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗಳಳಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಶಿರಾ.